**ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, 'ಸಾರಿಗೆ ಸೌಧ', ರಜತಾದ್ರಿ, ಮಣಿಪಾಲ, ದೂರವಾಣಿ ಸಂಖ್ಯೆ:0820 2575137, ಇಮೇಲ್ ಐಡಿ: rtoudp-ka@nic.in, ಸಾರಿಗೆ ಇಲಾಖೆಯ ವೆಬ್‌ಸೈಟ್: www.rto.kar.nic.in**

ನವೆಂಬರ್ 2016ರ ಅಂತ್ಯದ ವೇಳೆಗೆ ಈ ಕಛೇರಿ ವ್ಯಾಪ್ತಿಯಲ್ಲಿ ಒಟ್ಟು 3,58,917 ವಿವಿಧ ವರ್ಗದ ವಾಹನಗಳು ನೋಂದಣಿಯಾಗಿರುತ್ತದೆ. ಈ ಕಚೇರಿಗೆ 2016-17ನೇ ಸಾಲಿನಲ್ಲಿ ರೂ.11,114 ಲಕ್ಷಗಳು ರಾಜಸ್ವ ಸಂಗ್ರಹಣೆ ಗುರಿ ನಿಗಧಿಪಡಿಸಿದ್ದು, ನವೆಂಬರ್ 2016 ಅಂತ್ಯಕ್ಕೆ ರೂ.81,84,92,595 ರಾಜಸ್ವ ಸಂಗ್ರಹಿಸಲಾಗಿದ್ದು, ಶೇಕಡಾ 110.47 ರಷ್ಟು ಸಾಧನೆ ಮಾಡಲಾಗಿದೆ.

ಈ ಕಚೇರಿಯು ಜಿಲ್ಲಾ ಮಟ್ಟದ ಕಛೇರಿಯಾಗಿದ್ದು ಉಡುಪಿ, ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳ ವ್ಯಾಪ್ತಿಯನ್ನು ಹೊಂದಿರುತ್ತದೆ. ಸಾರ್ವಜನಿಕ ಸೇವೆಗಾಗಿ ಕುಂದಾಪುರ, ಕಾರ್ಕಳ, ಕಾಪು ಮತ್ತು ಪಡುಬಿದ್ರೆ ಯಲ್ಲಿ ಶಿಬಿರಗಳನ್ನು ಜರುಗಿಸಲಾಗುತ್ತಿದೆ.

ಈ ಪ್ರಾಧಿಕಾರದಲ್ಲಿ ಉಡುಪಿ ಜಿಲ್ಲೆಯ ಸೇರಿದಂತೆ ಪಕ್ಕದ ಜಿಲ್ಲೆಗಳವರೆಗೆ 776 ಮಜಲು ವಾಹನ ರಹದಾರಿ ಚಾಲ್ತಿಯಲ್ಲಿರುತ್ತದೆ.

ಸಾರಿಗೆ ಇಲಾಖೆಗೆ ಸಕಾಲದಡಿಯಲ್ಲಿ ಬರುವ 25 ಸೇವೆಗಳನ್ನು ಸಕಾಲದಡಿಯಲ್ಲಿ ನಿಗಧಿತ ಅವಧಿಯಲ್ಲಿ ಅರ್ಜಿಗಳನ್ನು ವಿಲೇ ಮಾಡಲಾಗುತ್ತಿದೆ. ಹಾಗೆಯೇ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಕೂಡಾ ನಿಗಧಿತ ಅವಧಿಯಲ್ಲಿ ವಿಲೇ ಮಾಡಲಾಗುತ್ತಿದೆ.

ಈ ಕಛೇರಿಯಲ್ಲಿ ಅಕ್ಟೋಬರ್ 2009ರಿಂದ ವಾಹನಗಳ ನೋಂದಣಿ ಪತ್ರ ಮತ್ತು ಚಾಲನಾ ಅನುಜ್ಞಾ ಪತ್ರಗಳಿಗೆ ಸ್ಮಾರ್ಟ್‌ಕಾರ್ಡ್ ನೀಡಲಾಗುತ್ತಿದೆ.

ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿಯಲ್ಲಿ ಈ ಕಛೇರಿಗೆ 2016-17ನೇ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಂದೊಂದು ಅಭ್ಯರ್ಥಿಗೆ ಲಘು ಮೋಟಾರು ವಾಹನ, ಆಟೋ ರಿಕ್ಷಾ ವಾಹನ ಚಾಲನಾ ತರಬೇತಿಗೆ ಗುರಿ ನೀಡಿದ್ದು, ಈ ಬಗ್ಗೆ ಅಗತ್ಯ ಕ್ರಮ ಜರುಗಿಸಿ ಚಾಲನಾ ಅನುಜ್ಞಾ ಪತ್ರ ವಿತರಿಸಲಾಗಿರುತ್ತದೆ.

**ಡ್ರೈವಿಂಗ್ ಟ್ರ್ಯಾಕ್**: ಮಾನ್ಯ ಜಿಲ್ಲಾಧಿಕಾರಿಗಳು, ಉಡುಪಿ ಇವರು ನಡಾವಳಿ ದಿನಾಂಕ 21.01.2015ರಲ್ಲಿ ಉಡುಪಿ ತಾಲೂಕಿನ ಅಲೆವೂರು ಗ್ರಾಮದ ಸರ್ವೆ ನಂ.20/ಪಿ1 ರಲ್ಲಿ (ಶಿವರಾಮ ಕಾರಂತ ಕಲಾ ಗ್ರಾಮದಲ್ಲಿ) 5 ಎಕ್ರೆ ಜಮೀನನ್ನು ಕಂಪ್ಯೂಟರೀಕೃತ ಡ್ರೈವಿಂಗ್ ಟ್ರ್ಯಾಕ್ ನಿರ್ಮಾಣ ಉದ್ದೇಶಕ್ಕೆ ಪ್ರಾದೇಶಿಕ ಸಾರಿಗೆ ಕಛೇರಿ, ಉಡುಪಿ ಹೆಸರಿಗೆ ಆರ್‌ಟಿಸಿ ನೀಡಿರುತ್ತಾರೆ. ಕಂಪೌಂಡ್ ಗೋಡೆ ನಿರ್ಮಿಸುವ ಕಾಮಗಾರಿ ಮುಗಿದಿದ್ದು, ಕೇಂದ್ರ ಕಛೇರಿ ನಿರ್ದೇಶನದಂತೆ ಕೆ.ಎಸ್.ಆರ್.ಟಿ.ಸಿ. ಇಂಜಿನಿಯರ್ ಡ್ರೈವಿಂಗ್ ಟ್ರ್ಯಾಕ್ ನಿರ್ಮಿಸುವ ಬಗ್ಗೆ ಸ್ಥಳ ಪರಿಶೀಲಿಸಿರುತ್ತಾರೆ.

ರಸ್ತೆ ಸುರಕ್ಷತೆ ಬಗ್ಗೆ ಅರಿವು ಹಾಗೂ ವಾಯುಮಾಲಿನ್ಯ ನಿಯಂತ್ರಣದ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಸಾರ್ವಜನಿಕ ವಲಯದಲ್ಲಿ ಮತ್ತು ಶಾಲಾ ಕಾಲೇಜುಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯಕ್ರಮವನ್ನು ಆಗಿಂದಾಗ್ಗೆ ನಡೆಸಲಾಗುತ್ತಿದೆ.

**(ಹೆಚ್.ಗುರುಮೂರ್ತಿ ಕುಲಕರ್ಣಿ)**
ಪ್ರಭಾರ ಉಪ ಸಾರಿಗೆ ಆಯುಕ್ತರು ಹಾಗೂ
ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ
ಉಡುಪಿ ಜಿಲ್ಲೆ, ಉಡುಪಿ

17/12